ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.
ನ್ಯಾಯಾಲಯ, ಚಿಕ್ಕಮಗಳೂರು.

ದಿನಾಂಕಃ **29 11 2022**

**ಸಿ.ಸಿ.ನಂ. 1634 : 2022**

ಪಿರ್ಯಾದುದಾರರು: ರಾಜ್ಯ ಸರ್ಕಾರದ ಪರವಾಗಿ ನಗರ ಠಾಣಾ ಪೊಲೀಸರು,

ವಿರುದ್ಧ

ಆರೋಪಿತರು:

1. ಎಂ.ರಾಜು, ಬಿನ್ ಲೇಟ್ ಮುನಿಸ್ವಾಮಿ
ವಯಸ್ಸುಃ 55 ವರ್ಷ, ಶಂಕರಪುರ ,
ಚಿಕ್ಕಮಗಳೂರು.

2. ಮುರುಗೇಶ, ಬಿನ್ ಐಯ್ಯದೊರೆ
ವಯಸುಃ 51 ವರ್ಷ,ಶಂಕರಪುರ ,
ಚಿಕ್ಕಮಗಳೂರು.
3. ರಂಜಿತ್ ಆರ್, ಬಿನ್ ರಾಜು ,
ಕೂಲಿ , ಶಂಕರಪುರ ,
ಚಿಕ್ಕಮಗಳೂರು.

ದೋಷಾರೋಪಣೆ

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ನಂದೀಶ ಆರ್.ಪಿ, ಬಿ.ಎ.ಎಲ್., ಎಲ್.ಎಲ್.ಬಿ., ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ 24.01.2022 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ನಗರದ ಹಳೆ ಜೈಲಿನ ಪಕ್ಕದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಚಾಸಾಃ1 ರವರ ಅಂಗಡಿ ಪಕ್ಕದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ಮುನಿಸ್ವಾಮಿ ರವರೊಡನೆ ಗಲಾಟೆ ತೆಗೆದು, ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಸ್ಥಳದಲ್ಲಿ ಅವರನ್ನು ಅವಮಾನ ಮಾಡಿದ್ದು ಆ

ಕಾರಣ ನೀವು ಭಾ.ದಂ.ಸಂ.ಕಲಂ.504 ಸಹಕಲಂ 34 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂಃ

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, 1 ನೇ ಆರೋಪಿಯಾದ ನೀವು ಚಾಸಾಃ1 ರವರರಿಗೆ ದೊಣ್ಣೆಯಿಂದ ತಲೆಯ ಎಡಬಾಗಕ್ಕೆ ಹೊಡೆದು ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಕಾರಣ ನೀವು ಭಾ.ದಂ.ಸಂ.ಕಲಂ.324 ಸಹಕಲಂ 34 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದುಾಃ

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಏಕ ಉದ್ದೇಶದಿಂದ 2 ಮತ್ತು 3 ನೇ ಆರೋಪಿಯಾದ ನೀವು ಚಾಸಾಃ1 ರವರರಿಗೆ ಕೈಯಿಂದ ಹೊಡೆದು ಮೈ ಕೈಗೆ ಗುದ್ದಿ ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಮೂಲಕ ನೀವು **ಭಾ.ದಂ.ಸಂ.ಕಲಂ.**323 **ಸಹ ಕಲಂ** 34 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

ಸಹಿ

( ನಂದೀಶ ಆರ್.ಪಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.